**ಕರ್ನಾಟಕ ಸರಕಾರ**

ಸಂ:ಬಿಜಿಎಂ:ಡಿಯುಡಿಸಿ:ಯುಪಿಎಸಿ:ಸಿಆರ್:1:2012-13

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ನಗರ ಬಡತನ ನಿರ್ಮೂಲನಾ ಕೋಶ,
ಬೆಳಗಾವಿ. ದಿನಾಂಕ:05.05.2012.

**ವಿಷಯ:-**ಪಟ್ಟಣ ಪಂಚಾಯತ ಸದಲಗಾ ವ್ಯಾಪ್ತಿಯಲ್ಲಿ 2012-13ನೇ ಸಾಲಿನ ಪಟ್ಟಣ ಪಂಚಾಯತ ಆದಾಯದಡಿ ಶೇ.7.25 ಮತ್ತು ಶೇ.3ರಡಿ ತೆಗೆದುಕೊಂಡ ಕಾರ್ಯಕ್ರಮ/ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ ಕುರಿತು.

**ಓದಿತು:-**1)ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ:415:ಜಿಇಎಲ್:2011 ದಿನಾಂಕ:27.02.2012

2)ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಸುತ್ತೋಲೆ ಸಂ:ಪೌನಿ:22.75:ಸುತ್ತೋಲೆ:2:2012-13 ದಿನಾಂಕ:24.04.2012

3)ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ಸದಲಗಾ ಇವರ ಪತ್ರ ಸಂಖ್ಯೆ: ಪಪಂಸ:2012-13:36 ದಿನಾಂಕ:28.04.2012.

**ಪ್ರಸ್ತಾವನೆ:**

2012-13ನೇ ಸಾಲಿಗೆ ಸದಲಗಾ ಪಟ್ಟಣ ಪಂಚಾಯತಿಯು ಸರ್ಕಾರದ ಸುತ್ತೋಲೆಯ ಮಾರ್ಗಸೂಚಿಗಳನ್ವಯ ಬಾಬ್ತುಗಳನ್ನು ಹೊರತುಪಡಿಸಿ ರೂ.30,98,000/- ಗಳ ಆದಾಯವನ್ನು ಹೊಂದಿರುತ್ತದೆ. ಅದರಂತೆ ಓದಿತು (3)ರನ್ವಯ ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ಸದಲಗಾ ಇವರು ಪಟ್ಟಣ ಪಂಚಾಯತ ಆದಾಯದಲ್ಲಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ರೂ. 2,24,605/-ಗಳಲ್ಲಿ 02 ಕಾರ್ಯಕ್ರಮಗಳಿಗೆ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಒಟ್ಟು ರೂ. 92,940/-ಗಳಲ್ಲಿ 02 ಕಾರ್ಯಕ್ರಮಗಳ ಕ್ರಿಯಾ ಯೋಜನೆ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಅದರಂತೆ ಓದಿತು (1)ರ ಸರ್ಕಾರದ ಸುತ್ತೋಲೆ ಮಾರ್ಗಸೂಚಿಯಂತೆ ಪರಿಶೀಲಿಸಲಾಗಿ, ಶೇ.7.25ರಷ್ಟು ನಗರದ ಇತರೆ ಬಡಜನರ ಕಲ್ಯಾಣ ನಿಧಿಗೆ ರೂ.2,24,605/-ಗಳಲ್ಲಿ 02 ಕಾರ್ಯಕ್ರಮಗಳಿಗೆ ಹಾಗೂ ಶೇ.3ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ರೂ. 92,940/-ಗಳಲ್ಲಿ 02 ಕಾರ್ಯಕ್ರಮಗಳ ಕ್ರಿಯಾ ಯೋಜನೆ ಅನುಮೋದನೆಗೆ ಪ್ರಸ್ತಾಪಿಸಿದ್ದನ್ನು ಪರಿಗಣಿಸಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ಹೆಸರು | ಅಂದಾಜು ಮೊತ್ತ (ರೂ. ಗಳಲ್ಲಿ) |
|---|---|---|
| *1* | *2* | *3* |
| | **ಶೇ.7.25ರ ಇತರೆ ಬಡಜನರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು** | |
| | **ವ್ಯಕ್ತಿ ಸಂಬಧಿತ ಅನುಕೂಲತೆಗಳು ಶೇ. 40%** | |
| 1 | ಸದಲಗಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಬಡಜನರಿಗೆ ಅಡುಗೆ ಅನಿಲ ಸಂಪರ್ಕ ಕಲ್ಪಿಸುವುದು. | 89,842.00 |

| | | |
|---|---|---|
| | **ಸಮುದಾಯ ಸೌಲಭ್ಯಗಳು ಶೇ. 60%** | |
| 2 | ಪ್ರಕಾಶ ನಗರದ ಆಶ್ರಯ ಬಡಾವಣೆಯಲ್ಲಿ ಬರುವ ಆರ್ಘೂದ ಕಾಲೆ ಕಿರಾಣಿ ಅಂಗಡಿಯಿಂದ ಚಂದ್ರು ಪಕಾಲೆ ಮನೆಯವರೆಗೆ ಮತ್ತು ನಾವಿ ಸಮಾಜ ಮಂದಿರದಿಂದ ಶಾಲಾಬಾಯಿ ಮನೆಯವರೆಗೆ 3" ಪೈಪ್‌ಲೈನ್ ಮಾಡುವುದು. | 1,34,763.00 |
| | **ಒಟ್ಟು** | **2,24,605.00** |
| | **ಶೇ.3ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು** | |
| | **ವ್ಯಕ್ತಿ ಸಂಬಧಿತ ಅನುಕೂಲತೆಗಳು ಶೇ. 40%** | |
| 1 | ಸದಲಗಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಬರುವ ವಿಕಲಚೇತನ ಸಣ್ಣ ಉದ್ದಿಮೆದಾರರಿಗೆ ಸಹಾಯಧನ ನೀಡುವುದು. | 37,176.00 |
| | **ಸಮುದಾಯ ಸೌಲಭ್ಯಗಳು ಶೇ. 60%** | |
| | ಮೂಲ ಸೌಕರ್ಯಗಳು | |
| 2 | ಸದಲಗಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಮಲ್ಲಿಕಾರ್ಜುನ ಸಮುದಾಯ ಭವನದ ಕಟ್ಟಡಕ್ಕೆ ಜಾರು ಹಾದಿ ನಿರ್ಮಿಸುವುದು. | 55,764.00 |
| | **ಒಟ್ಟು** | **92,940.00** |

## ಆದೇಶ

ಮೇಲಿನ ಪ್ರಸ್ತಾವನೆಯಂತೆ ಪಟ್ಟಣ ಪಂಚಾಯತ ಸದಲಗಾ ವ್ಯಾಪ್ತಿಯಲ್ಲಿ 2012–13ನೇ ಸಾಲಿನ ಪುರಸಭೆ ಆದಾಯದಡಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಯೋಜನೆಯಡಿ ರೂ. 2,24,605/–ಗಳಲ್ಲಿ 02 ಕಾರ್ಯಕ್ರಮಗಳಿಗೆ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಯೋಜನೆಯಡಿ ರೂ. 92,940/–ಗಳಲ್ಲಿ 02 ಕಾರ್ಯಕ್ರಮಗಳನ್ನು ಕೈಕೊಳ್ಳಲು ಕ್ರಿಯಾಯೋಜನೆ ಅನುಮೋದನೆ ನೀಡಿ ಓದಿತು (1) ಹಾಗೂ (2)ರ ಸರ್ಕಾರದ ಸುತ್ತೋಲೆಯ ನಿಬಂಧನೆ ಹಾಗೂ ಷರತ್ತುಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ.

**ಸಹಿ/–**

**(ವಿ. ಅನ್ಬುಕುಮಾರ)**

ಜಿಲ್ಲಾಧಿಕಾರಿಗಳು, ಬೆಳಗಾವಿ

**ಪ್ರತಿ:**ಗೌರವಾದರಗಳೊಂದಿಗೆ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಾದರಪಡಿಸಿದೆ.

**ಪ್ರತಿ:**ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ.

**ಪ್ರತಿ:**ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ ಸದಲಗಾ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಸಹಿ/–**

ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ,
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ